Indian Streams Research Journal
ISSN: 2230-7850 Impact Factor : 4.1625(UIF) Volume - 6 | Issue - 11 | December - 2016

# ಸಿದ್ದರಾಮಯ್ಯನವರ ರಾಜಕೀಯ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಸಮಾನತೆಯ ಅಂಶಗಳು

ಶ್ರೀ ಎಮ್.ಎಸ್. ಹೊಸಗೂರ[1] , ಡಾ: ಎಸ್ ಎನ್. ಹುಲ್ಲಣ್ಣವರ[2]
[1]ಸಂಶೋಧನಾ ವಿದ್ಯಾರ್ಥಿ , ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
[2]ಸಹ ಪ್ರಾಧ್ಯಾಪಕರು , ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ಮಹಾವಿದ್ಯಾಲಯ, ಧಾರವಾಡ.

**ಸಾರಾಂಶ:**
ಮಾನವ ಚರಿತ್ರೆಯನ್ನು ನೋಡಿದರೆ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸಮಾಜಕ್ಕೆ ಹಾಗೂ ಸಾರ್ವಜನಿಕರಿಗೆ ಇರುವ ಬದ್ಧತೆಯ ಕಾರಣದಿಂದ ಸಿದ್ದರಾಮಯ್ಯ ಕರ್ನಾಟಕದ ಉನ್ನತಿಯನ್ನು ಪರಿಗಣಿಸಲಾಗುವ ಉದ್ದೇಶಗಳನ್ನು ತಿಳಿಯುವದು ಬಹಳ ಮುಖ್ಯ. ಪ್ರಸ್ತುತ ಲೇಖನ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯ ಸ್ಥಾನವನ್ನು ಅಲಂಕರಿಸಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ರಾಜಕೀಯ ಸಾಧನೆಗಳನ್ನು ವಿವರಿಸುತ್ತದೆ.

**ಪೀಠಿಕೆ:**
ಭಾರತವು ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ಹೊಂದಿದ ಗಾಂಧಿಜೀಯವರ ರಾಮರಾಜ್ಯದ ಕನಸಾಗಿದೆ. ಪ್ರಜೆಗಳ ಜೀವನವು ಸುಖಕರವಾದ ಬದುಕನ್ನು ವ್ಯವಸ್ಥಿತಗೊಳಿಸಲು ಸರ್ವತೋಮುಖ ಅಭಿವೃದ್ಧಿಗೆ ಸಮಾಜವಾದ, ಜಾತ್ಯಾತೀತ, ಸಮಾನತೆ, ಸ್ವಾತಂತ್ರ್ಯಗಳನ್ನು ಸಾಧಿಸುವ ನಿಟ್ಟಿನಲ್ಲಿ ನಮ್ಮ ನಾಯಕರ ಪಾತ್ರವು ಮುಖ್ಯವಾಗಿದೆ. ಭಾರತದ ಮಹಾನ್ ನಾಯಕರು ಕಲ್ಯಾಣ ರಾಜ್ಯದ ತತ್ವಗಳನ್ನು




ಅನುಷ್ಠಾನಕ್ಕೆ ತರುವಲ್ಲಿ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಅಳವಡಿಸಿಕೊಂಡಿದ್ದಾರೆ.
ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸು, ಜನರು ಸರ್ಕಾರದ ಜೊತೆ ನಿಕಟವಾಗಿ ಸಂಪರ್ಕವನ್ನು ಹೊಂದಿ, ಸರಕಾರದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಹಾಗೂ ರಾಜಕೀಯ ನಾಯಕರು ವಹಿಸುವ ಸಕ್ರೀಯವಾದ ಪಾತ್ರದ ಮೇಲೆ ಅವಲಂಬಿತವಾಗಿರುವದನ್ನು ಕಾಣುತ್ತೇವೆ. ರಾಷ್ಟ್ರದ ಜನರು ದೇಶದ ರಾಜಕೀಯ ವ್ಯವಸ್ಥೆ, ರಾಜಕೀಯ ನಾಯಕರು, ಸರಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ತಮ್ಮದೇ ಆದ ಸ್ವಂತ ನಿರ್ಧಾರಗಳನ್ನು ತಿಳಿಸಿರುವುದನ್ನು ಅಪೇಕ್ಷಿಸಲಾಗುತ್ತದೆ, ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಜನರಿಗೆ ಅಧಿಕಾರವಿರುತ್ತದೆ.
ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರಿಕರಣ ತತ್ವವು ಜನರಿಗೆ ಫಲಪ್ರದವಾಗಿ ಸರ್ಕಾರದ ಸಾಮೀಪ್ಯವನ್ನು ಹೊಂದಿ, ವಿವಿಧ ಹಂತಗಳಲ್ಲಿ ರಾಜಕೀಯ ಅಧಿಕಾರವನ್ನು ಕೊಡುವುದರ ಮೂಲಕ ರಾಜಕೀಯ ನಾಯಕರು ಪ್ರಾದೇಶಿಕ ಅಭಿವೃದ್ದಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ, ಇದರಿಂದಾಗಿ ಭಾರತವು ಒಕ್ಕೂಟ ಮಾದರಿಯ ವ್ಯವಸ್ಥೆಯನ್ನು ಹೊಂದಿದೆ.
ಸ್ವಾತಂತ್ರ್ಯದ ನಂತರ ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರವನ್ನು ಹಂಚಿದ್ದರಿಂದ ಕೇಂದ್ರ ಮಟ್ಟದಲ್ಲಿ ರಾಷ್ಟ್ರಪತಿ ನೇಮಿಸಿದ ಪ್ರಧಾನಮಂತ್ರಿ ಹಾಗೂ ಮಂತ್ರಿಮಂಡಲವನ್ನು ಹೊಂದಿದೆ. ರಾಜ್ಯಮಟ್ಟದಲ್ಲಿ ರಾಜ್ಯಪಾಲರು ನೇಮಿಸಿದ ಮುಖ್ಯಮಂತ್ರಿ ಹಾಗೂ ಮಂತ್ರಿಮಂಡಲವನ್ನು ಹೊಂದಿದೆ. ರಾಜ್ಯಾಡಳಿತದಲ್ಲಿ ರಾಜ್ಯದ ಪ್ರಮುಖ ನಾಯಕರಾಗಿ, ಹಲವು ಮಹಾನ ಧೀಮಂತ ನಾಯಕರು ಕರ್ನಾಟಕದ ಪ್ರಗತಿಗಾಗಿ ತಮ್ಮ ಜೀವನವನ್ನು ದೀನ ದಲಿತರ ಜೀವನವನ್ನು ಸುಧಾರಿಸುವ ಸಲುವಾಗಿಯೇ ಸೇವೆಮಾಡಲು ಶಾಸನ ಸಭೆಗೆ ಪ್ರಜೆಗಳಿಂದ ಆಯ್ಕೆಯಾಗಿ ಜನಪರ ಆಡಳಿತವನ್ನು ನಡೆಸುವುದರಲ್ಲಿ ಕರ್ನಾಟಕದ ನಾಯಕರ ದೃಷ್ಟಿಕೊನವು ವಿಶಾಲವಾಗಿದ್ದನ್ನು ನಾವು ಕಾಣುತ್ತೇವೆ. ನಾಯಕರಾದ ಶ್ರೀ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಕಡಿದಾಳ ಮಂಜಪ್ಪ, ಎಸ್. ನಿಜಲಿಂಗಪ್ಪ. ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ್, ಡಿ.ದೇವರಾಜ್ ಅರಸ್ ಮುಂತಾದ ನಾಯಕರು ಇದರ ಉದಾಹರಣೆಯಾಗಿದ್ದಾರೆ.
ಇವರು ಅನೇಕ ಜನಪರ ಕಾನೂನುಗಳನ್ನು ಜಾರಿಗೆ ತಂದರು. ಊಳುವವನೇ ಭೂ ಒಡೆಯ ಹಾಗೂ ವಿದ್ಯಾರ್ಥಿಗಳಿಗೆ ಹಲವಾರು ಯೋಜನೆಗಳು ಹಾಗೂ ರೈತರ ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆಗಳನ್ನು ನಿಗದಿಪಡಿಸಿ ಜನಪರ ಆಡಳಿತ ಮಾಡಿದ ನಾಯಕರನ್ನು ನಮ್ಮ ನಾಡು ಕಂಡಿದೆ. ಇದೇ ಪ್ರಕಾರ, ಶ್ರೀಮಾನ್ಯ ಸಿದ್ಧರಾಮ್ಯುನವರು ಹಲವಾರು ಜನಪರ ಕಾರ್ಯಕ್ರಮಗಳನ್ನು, ಅವರು ಶಾಸಕರಾಗಿ, ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ, ವಿರೋಧಪಕ್ಷ ನಾಯಕರಾಗಿ ಮತ್ತು ಮುಖ್ಯಮಂತ್ರಿಯಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ

ತಂದಿದ್ದಾರೆ. ರೈತರ, ದಿನ–ದಲಿತ ಹಿಂದುಳಿದ ಅಲ್ಪಸಂಖ್ಯಾತ ವರ್ಗದವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಇವರು ನಿಷ್ಠುರ ಹಾಗೂ ದೃಢ ಸ್ವಭಾವದವರಾಗಿ ಈ ನಾಡಿನ ಒಳ್ಳೆಯ ನಾಯಕರಲ್ಲಿ ಒಬ್ಬರಾಗಿರುವುದರಲ್ಲಿ ಅವರ ಜನಪರ ನೀತಿಗಳಿಂದ ತಿಳಿಯುತ್ತದೆ. ಇವರು 1978ರಲ್ಲಿ ತಾಲ್ಲೂಕೂ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಗೆಲ್ಲುವುದರ ಮೂಲಕ ರಾಜಕೀಯ ಪ್ರವೇಶ ಪಡೆದರು. 1980ರಲ್ಲಿ ಮೈಸೂರು ಲೋಕಸಭೆ ಚುನಾವಣೆಗೆ ಲೋಕದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡಿದ್ದಾರೆ. ಆಗ ರಾಜಶೇಖರರವರು ಗೆಲ್ಲುತ್ತಾರೆ. ಆದರೂ ಅದಕ್ಕೆ ಅವರು ಧೃತಿಗೆಡದೆ, ಅಂದಿನಿಂದ ಇಂದಿನವರೆಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಜನಪರ ಕಾರ್ಯಗಳಲ್ಲಿ ತೊಡಗಿ, ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಕಾಣಿಸುತ್ತಾ, ರಾಜಕೀಯ, ಸಾಮಾಜಿಕ ವ್ಯವಸ್ಥೆಯನ್ನು ಸಶಕ್ತಗೊಳಿಸುವಲ್ಲಿ ಶ್ರಮಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಭಾರತದ ರಾಷ್ಟ್ರಪತಿಯವರಾದ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಹೇಳಿಕೆಯನ್ನು ಗಮನಿಸಿದಾಗ. "ರಾಷ್ಟ್ರಗಳ ನಿರ್ಮಾಣವು ಮಹಾನ್ ನಾಯಕರ ಕಲ್ಪನೆ; ಪ್ರಾಮಾಣಿಕ ಪ್ರಯತ್ನ ಹಾಗೂ ಉತ್ಸಾಹಗಳ ಮೇಲೆ ಆಧಾರಿತವಾಗಿದೆ."

ಮೇಲಿನ ಹೇಳಿಕೆಗೆ ಅನುಸಾರವಾಗಿ ನಾಯಕರು ಉತ್ತಮ ಆಡಳಿತವನ್ನು ಸಾಧಿಸುವುದರ ಜೊತೆಗೆ ರಾಷ್ಟ್ರ ನಿರ್ಮಾಣದ ಸಲುವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳವುದು ಅವಶ್ಯಕವಾಗಿದೆ. ಆದ್ದರಿಂದ ಈ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದು ನಾವು ಕೈಕೊಂಡಿರುವ ಈ ಲೇಖನದ ಮೂಲ ಉದ್ದೇಶವಾಗಿದೆ.

## ನಾಯಕತ್ವದ ಅರ್ಥ

ಸಾಮಾನ್ಯ ಅರ್ಥದಲ್ಲಿ ನಾಯಕತ್ವವನ್ನು 'ಶ್ರೇಷ್ಠ ಅಧಿಕಾರ ಸ್ಥಾನ' ಅಥವಾ 'ಸಾಮಾಜಿಕ ಶ್ರೇಷ್ಠತೆ' ಎಂದು ಕರೆಯಲಾಗಿದೆ. ನಾಯಕತ್ವವೆಂದರೆ ಜನರ ಮೇಲೆ ಬೀರುವ ಪ್ರಭಾವ ಅಥವಾ ಸಾಮರ್ಥ್ಯವಾಗಿದೆ. ಅದರಂತೆ "ನಾಯಕತ್ವವು ಒಬ್ಬ ಶ್ರೇಷ್ಠ ವ್ಯಕ್ತಿ ಹಲವು ಸಾಮಾಜಿಕ ಹಿತಾಸಕ್ತಿಗಳಿಗಾಗಿ ಜನಸಮುದಾಯದ ಮೇಲೆ ಪ್ರಭಾವ ಬೀರುವ ಕ್ರಿಯೆ"ಯಾಗಿದೆ.

ಶಬ್ದಕೋಶದ ಅರ್ಥದ ಅನ್ವಯ Leadership ಎಂಬ ಇಂಗ್ಲೀಷ ಪದವು Lead, ಎಂಬ ಪದದಿಂದ ರೂಪಿತವಾಗಿದ್ದು, ಅದರ ಅರ್ಥ ಮುಂದಾಳತ್ವ ವಹಿಸುವುದು, ಪ್ರಮುಖ ಸ್ಥಾನ ಪಡೆಯುವದು, ಅಧಿಕಾರ ಉಳ್ಳವರಾಗಿರುವುದು ಎಂಬ ಅಂಶಗಳನ್ನು ಸೂಚಿಸುತ್ತದೆ. "ನಾಯಕತ್ವದ ಅರ್ಥವನ್ನು ಸಮಾಜ ವಿಜ್ಞಾನಿಗಳು ವಿವಿಧ ಪ್ರಕಾರಗಳಲ್ಲಿ ವ್ಯಾಖ್ಯಾನಿಸಿದ್ದಾರೆ".

1) ಸಿ.**ಕೆ.ಅಲೆನ್** ಅವರ ಪ್ರಕಾರ "ಸಾಮೂಹಿಕ ಗುರಿಗಳನ್ನು ಸಾಧಿಸಲು ಜನರನ್ನು ಸಹಕರಿಸುವಂತೆ ಮಾಡಲು ಇರುವ ವ್ಯವಸ್ಥೆ ನಾಯಕತ್ವವಾಗಿದೆ".
2) **ಓರ್ವೆ ಟೀಡ** ಅವರು "ಜನರು ಬಯಸುವ ಗುರಿಗಳನ್ನು ಮುಟ್ಟಲು ಅವರ ಸಹಕಾರ ಪಡೆಯಲು ಬೀರುವ ಪ್ರಭಾವದ ಕ್ರಿಯೆಯನ್ನು ನಾಯಕತ್ವ ಎಂದು ವ್ಯಾಖ್ಯಾನಿಸಿದ್ದಾರೆ".
3) **ಈ.ಎಸ್.ಬೋರ್ಗಾದಾಸರ** ಪ್ರಕಾರ "ನೂರಾರು ಜನರ ಮೇಲೆ ವಿಶೇಷ ಪ್ರಭಾವ ಬೀರುವ ಪರಿಣಿತ ವ್ಯಕ್ತಿಯೇ ನಾಯಕ" ನಾಯಕತ್ವವು ಬೌದ್ಧಿಕತೆಯನ್ನು ಉತ್ತೇಜನಗೊಳಿಸುವ ವ್ಯವಸ್ಥೆಯ್ಯಾಗಿದೆ".
4) ನಾಯಕನು ಸಾಮಾನ್ಯ ಜನರಲ್ಲಿ ಅಸಮಾನ್ಯನಾಗಿ ಜನರ ಮನಸ್ಸನ್ನು ಉತ್ತೇಜನಗೊಳಿಸುತ್ತ ಅವರು ಸಾಮೂಹಿಕ ಜವಾಬ್ದಾರಿಗಳಿಗೆ ಸ್ಪಂದಿಸುವಂತೆ ಮಾಡುವ ವ್ಯಕ್ತಿಯಾಗಿದ್ದಾನೆ".

ಈ ಮೇಲಿನ ವ್ಯಾಖ್ಯಾನಗಳಿಂದ ನಾಯಕತ್ವದ ಗುಣವು ಕೆಲವರಿಗೆ ಹುಟ್ಟು ಗುಣವಾದರೆ ಕೆಲವರಿಗೆ ವಂಶಪರಂಪರೆಯಾಗಿ ಬಂದಿರುತ್ತದೆ. ಹಾಗೂ ಕೆಲವರಿಗೆ ಆಯಾ ಸಮಯ ಸಂದರ್ಭಕ್ಕೆ ತಕ್ಕಂತೆ, ನಾಯಕತ್ವ ಗುಣಗಳು ಬೆಳೆದು ಬಂದಿರುತ್ತವೆ. ಅದೇ ರೀತಿ ಕೆಲವರಿಗೆ ಕಠಿಣ ಪರಿಶ್ರಮ, ಸತತವಾಗಿ ಜನರ ಸೇವೆ ಮಾಡುವುದು ಹಾಗೂ ಪ್ರಯತ್ನಗಳಿಂದ ನಾಯಕತ್ವ ಗುಣವು ಬೆಳೆದುಬಂದಿರುತ್ತದೆ.

## ಅಧ್ಯಯನದ ಉದ್ದೇಶ

ಪ್ರಸ್ತುತ ಲೇಖನದಲ್ಲಿ ಈ ಕೆಳಕಂಡ ಉದ್ದೇಶಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಅವುಗಳೆಂದರೆ–

1. ಕರ್ನಾಟಕದ ರಾಜಕೀಯದಲ್ಲಿ ಸಾಮಾಜಿಕ ನ್ಯಾಯದ ನಾಯಕರಾಗಿ ಸಿದ್ದರಾಮಯ್ಯನವರ ನಾಯಕತ್ವವನ್ನು ವಿವರಿಸುವುದು.
2. ತಮ್ಮ ನಾಯಕತ್ವವನ್ನು ಸಶಕ್ತಗೊಳಿಸಿಕೊಳ್ಳಲು ಸಿದ್ದರಾಮಯ್ಯನವರ ಸಾಮಾಜಿಕ ರಂಗದ ಪ್ರಗತಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿರುವ ವಿಧಾನ ಕಂಡುಕೊಳ್ಳುವುದು.
3. ಇಂದಿನ ರಾಜಕೀಯ ನಾಯಕರಿಗಿಂತ ಸಿದ್ದರಾಮಯ್ಯನವರು ಹೇಗೆ ಭಿನ್ನರಾಗಿದ್ದಾರೆ ಎಂಬುದುನ್ನು ವಿಶ್ಲೇಷಿಸುವುದು.
4. ಸಿದ್ದರಾಯ್ಯನವರು ರಾಜಕೀಯ ಕ್ಷೇತ್ರದಲ್ಲಿ ಸಮಾನತೆ ಸ್ಥಾಪಿಸಲು ಕೈಗೊಂಡಿರುವ ಮಾರ್ಗಗಳನ್ನು ವಿಶ್ಲೇಷಿಸುವುದಾಗಿದೆ.
5. ಪ್ರಚಲಿತ ರಾಜಕೀಯದಲ್ಲಿ ಅವರು ಅಹಿಂದ ಸಮಾಜ ವರ್ಗದ ಧುರೀಣರಾಗಿ ಅಭಿವೃದ್ಧಿಯ ಹರಿಕಾರರಾಗಿ ಹೊರಹೊಮ್ಮುತ್ತಿರುವ ಕುರಿತು ವಿವರಿಸುವುದು.

## ಮುಖ್ಯಮಂತ್ರಿಯಾಗಿ ಶ್ರೀ ಸಿದ್ದರಾಮಯ್ಯನವರು

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಪದವಿ ಪಡೆಯಬೇಕೆಂದು ಹಂಬಲಿಸಿದವರು ಅಹಿಂದ ವರ್ಗದ ಜನರೊಂದಿಗೆ ಅವರ ಹಿತೈಷಿಗಳು ಅಷ್ಟೇ ಅಲ್ಲ. ಪ್ರತಿಪಕ್ಷದ ಅನೇಕ ನಾಯಕರೂ ಇದ್ದರು. ಇದಕ್ಕೆ ಕಾರಣ ಹಲವು. ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಅವರು ಖಾತೆಗಳನ್ನು ನಿಭಾಯಿಸಿದ ರೀತಿ, ವಿತ್ತ ಸಚಿವರಾಗಿ ಕೊಟ್ಟ ಮುಂಗಡ ಪತ್ರಗಳು, ಇದಕ್ಕೂ ಮುಖ್ಯವಾಗಿ ಅವರ ನೇರ ನಡೆ, ನುಡಿ, ಯಾವುದೇ ಹಗರಣದಲ್ಲೂ ಸಿಲುಕದ ವ್ಯಕ್ತಿತ್ವ. ಸಾಮಾಜಿಕ ಬದ್ಧತೆ, ಇರುವ ಹಿಂದುಳಿದ ವರ್ಗಗಳ ನಾಯಕರೊಬ್ಬರು ಸಿ.ಎಂ.ಆಗಲಿ ಎಂಬ ಆಶಯವಾಗಿತ್ತು. ಶ್ರೀಯುತರು ಅಹಿಂದ ಕಾರ್ಯಕ್ರಮಗಳ ಮೂಲಕ ಆ ವರ್ಗದ ಮತಗಳನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಇದರ ಜೊತೆಯಲ್ಲಿ ಮೇಲ್ವರ್ಗದ ಜನರ ವಿಶ್ವಾಸವನ್ನು ಪಡೆದುಕೊಂಡು ಅಹಿಂದೇತರರನ್ನು ಒಟ್ಟುಗೂಡಿಸಿಕೊಂಡು ಸಮಾಜದ ಎಲ್ಲ ವರ್ಗದವರ ಹಿತ ಕಾಯುವ ಕಾರ್ಯಮಾಡುವುದಕ್ಕಾಗಿ ಮೇ 13–2013 ರಂದು ಕರ್ನಾಟಕದ 22ನೆಯ ಮುಖ್ಯಮಂತ್ರಿಯಾದರು.

ಸಿದ್ದರಾಮಯ್ಯನವರು ಮೇ 13, 2013 ಬಸವ ಜಯಂತಿಯಂದು ಸತ್ಯದ ಹೆಸರಿನಲ್ಲಿ ಕರ್ನಾಟಕದ 22 ನೆಯ ಮುಖ್ಯಮಂತ್ರಿಯಾಗಿ ಪ್ರಮಾಣವಚನವನ್ನು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಾಹಿತಿಗಳು, ಸ್ವಾತಂತ್ರ್ಯ ಹೋರಾಟಗಾರರು, ಕಲಾವಿದರು, ವಿದ್ವಾಂಸರು, ಮತದಾರರ ಸಮ್ಮುಖದಲ್ಲಿ ಜನಸಾಗರದ ಮಧ್ಯೆ ಪ್ರಮಾಣ ವಚನ ಸ್ವೀಕರಿಸಿದರು. ಹಸಿದ ಹೊಟ್ಟೆಗಳು ಮತ್ತು ಮಾನವನ ಸಂಕಷ್ಟಗಳ ಮೇಲೆ ವಿಶ್ವಶಾಂತಿಯನ್ನು ಸಾಕಾರಗೊಳಿಸಲು ಸಾಧ್ಯವಾಗದು ಎಂದು ನಾರ್ಮನ್ ಬೋರ್ಲಾಗ್‌ರವರ ನುಡಿಯನ್ನು ಮೈಗೂಡಿಸಿಕೊಂಡು ಕೂಡಲೆ, ಜನಪರ ಯೋಜನೆಗಳನ್ನು ಮರುಘಳಿಗೆಯಲ್ಲಿ **ಅನ್ನಭಾಗ್ಯ, ಕ್ಷೀರಧಾರೆ, ಭಾಗ್ಯಜ್ಯೋತಿ, ವಸತಿಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಋಣ ಮುಕ್ತ ಭಾಗ್ಯ, 'ಮನಸ್ವಿನಿ ಮೈತ್ರಿ' ಯೋಜನೆ, ಅಲ್ಪಸಂಖ್ಯಾತರ ಕಲ್ಯಾಣ ಯೋಜನೆ, ಮೀನುಗಾರಿಕೆಗೆ ಪ್ರೋತ್ಸಾಹ** ಮತ್ತು **ಪಶುಪಾಲನಾ ಮತ್ತು ಪಶುವೈದ್ಯ ಯೋಜನೆ** ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ, ಸಾಲಮನ್ನಾ, ಮುಂತಾದ ಜನಪರ ಯೋಜನೆಗಳನ್ನು ಜಾರಿಗೆ ತಂದರು. ಸಿದ್ದರಾಮಯ್ಯನವರು ಪ್ರಜಾಪ್ರಭುತ್ವ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡು ರಾಜಕೀಯದಲ್ಲಿ ತಾಂಡವವಾಡುತ್ತಿರುವ ಸಂಕುಚಿತ ಜಾತಿ ವ್ಯಾಮೋಹ, ಕುಟುಂಬ ಪ್ರೇಮ, ಸ್ವಾರ್ಥ ಸಾಧನೆ, ಮುಂತಾದವುಗಳಿಂದ ಹೊರತಾಗಿ ಉಳಿದಿರುವದರಿಂದಲೇ, ರಾಜಕೀಯವಾಗಿ ಪ್ರಬುದ್ಧಮಾನಕ್ಕೆ ಬಂದರು.

**ಪ್ರಜಾಸುಖೇ ಸುಖಂ ರಾಜ್ಞಃ ಪ್ರಜಾನಾಂಚ ಹಿತೇ ಹಿತಂ**
**ನಾತ್ಮ ಪ್ರಿಯಂ ಹಿತಂ ರಾಜ್ಞಃ ಪ್ರಜಾ ನಾಂತು ಹಿತಂ ಹಿತಂ ॥**

ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ ಕೌಟಿಲ್ಯನ ಈ ಮಾತುಗಳ ತಾತ್ಪರ್ಯವಾದರೂ ಇಷ್ಟೆ. "ಪ್ರಜೆಗಳ ಹಿತದಲ್ಲಿಯೇ ರಾಜನ ಸುಖವೂ ಇದೆ. ಪ್ರಜೆಗಳ ಹಿತದಿಂದಲೇ ರಾಜನಿಗೆ ಹಿತವುಂಟಾಗುತ್ತದೆ. ಸ್ವತಃ ರಾಜನಿಗೆ ಮಾತ್ರ ಹಿತವಾದದ್ದು ನಿಜವಾದ ಹಿತವಾಗುವುದಿಲ್ಲ. ಪ್ರಜೆಗಳಿಗೆ ಹಿತವಾದದ್ದೇ ರಾಜನಿಗೂ ಹಿತ".

ಈ ಮೇಲಿನ ವಿಷಯವಾಗಿ ನೋಡಿದರೆ ಶ್ರೀಯುತರು ಇಡೀ ಕರ್ನಾಟಕದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಮತ್ತು ಅಹಿಂದ ವರ್ಗಕ್ಕೆ ಸಿಗಬೇಕಾದ ಅಧಿಕಾರವನ್ನು ಸಾಧ್ಯವಾದ ಮಟ್ಟಿಗೆ ದೊರೆಯುವಂತೆ ಮಾಡಿದ್ದಾರೆ. ಇವರು ಅಹಿಂದ ನಾಯಕರಾಗಿ ಮತ್ತು ಸಮಸ್ತ ಕರ್ನಾಟಕ ಜನತೆಯ ಯಶಸ್ವಿ ರಾಜಕಾರಣಿಯಾಗಿ, ಕರ್ನಾಟಕದ ಮುಖ್ಯಮಂತ್ರಿಯಾಗಿ ಕಾರ್ಯ ಮಾಡುತ್ತಿದ್ದಾರೆ.

### ಜಾತ್ಯಾತೀತತೆ

ರಾಜಕಾರಣಿಯಾದವನು ಮನುಷ್ಯನನ್ನು ಪ್ರೀತಿ ಮತ್ತು ಸಹಬಾಳ್ವೆಗೆ ಸಿದ್ಧಪಡಿಸಬೇಕೇ ಹೊರತು ಅವರ ನಡುವೆ ಕಂದಕಗಳನ್ನು ಸೃಷ್ಟಿಸಬಾರದು. ***ಪಿ.ಲಂಕೇಶ.***

ನಮ್ಮ ಸಮಾಜದಲ್ಲಿ ಶ್ರೇಣಿಕೃತ ವ್ಯವಸ್ಥೆಯು ಸಾವಿರಾರು ವರ್ಷಗಳ ಹಿಂದಿನಿಂದಲೂ ಬೆಳೆದು ಬಂದಿದೆ. ಇದರೊಂದಿಗೆ ಜಾತಿ ವ್ಯವಸ್ಥೆ, ವರ್ಗ ವ್ಯವಸ್ಥೆ, ಮೇಲು–ಕೀಳು ಎಂಬ ತಾರತಮ್ಯ ಶತ ಶತಮಾನಗಳಿಂದ ಬೆಳೆದುಕೊಂಡು ಬಂದಿದೆ. ಸಿದ್ದರಾಮಯ್ಯನವರು "ಜಾತಿ, ವರ್ಗ, ಮೇಲು–ಕೀಳು ಎಂಬ ತಾರತಮ್ಯಗಳ ವ್ಯವಸ್ಥೆ ಹೋಗಬೇಕು. ಎಲ್ಲರೂ ಸಮಾನವಾಗಿ ಬದುಕುವಂತಹ ಸಮಾನತೆಯ ಭಾವನೆಯುಳ್ಳ ಸಮಾಜ ನಿರ್ಮಾಣವಾಗಬೇಕು." ಎಂಬ ವಿಚಾರವನ್ನು ಇಟ್ಟುಕೊಂಡು ಶ್ರೀಯುತರು ಯಾವುದೇ ಒಂದು ಜಾತಿಗೆ ಸೀಮಿತವಾದವರಲ್ಲ ಇವರು ಎಲ್ಲ ಜಾತಿಯವರೊಂದಿಗೆ ಪ್ರೀತಿ ವಿಶ್ವಾಸದಿಂದ ಮುನ್ನಡೆಯುತ್ತಿದ್ದಾರೆ. ಎಲ್ಲರೂ ಸಮಾನವಾಗಿ ಸುಖದಿಂದ ಬಾಳಬೇಕೆಂಬ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂದಿದ್ದಾರೆ. ಸಿದ್ದರಾಮಯ್ಯನವರು ಕುರುಬ ಜಾತಿಯ ಜನಾಂಗದಲ್ಲಿ ಹುಟ್ಟಿದರೂ ಸಹ ಮೂರು ವರ್ಷಗಳ ಕಾಲ ತಮ್ಮ ಸಚಿವ ಸಂಪುಟದಲ್ಲಿ ಸ್ವಜಾತಿಯ ಶಾಸಕರನ್ನು ನೇಮಕ ಮಾಡಿಕೊಳ್ಳಲಿಲ್ಲ. ನಂತರದ ದಿನದಲ್ಲಿ ಸಾಮಾಜಿಕ ನ್ಯಾಯ ಕೊಡುವ ಉದ್ದೇಶದಿಂದ ತಮ್ಮ ಜಾತಿಯ ಕೇವಲ ಒಬ್ಬರನ್ನು ಮಾತ್ರ ತಮ್ಮ ಸಂಪುಟಕ್ಕೆ ನೇಮಕ ಮಾಡಿಕೊಂಡಿದ್ದಾರೆ. ಆದರೆ ಇನ್ನುಳಿದ ಮುಖ್ಯಮಂತ್ರಿಗಳು ತಮ್ಮ ಮುಖ್ಯಮಂತ್ರಿಯ ಅಧಿಕಾರಾವಧಿಯಲ್ಲಿ ಸ್ವಜಾತೀಯರು 7 ರಿಂದ 8 ಶಾಸಕರನ್ನು ಸಂಪುಟಕ್ಕೆ ಸೇರಿಕೊಂಡಿದ್ದ ಉದಾಹರಣೆಗಳಿವೆ. ಆದರೆ ಸಿದ್ದರಾಮಯ್ಯನವರು ಜಾತಿಯನ್ನು ಹಾಗೂ ಜಾತಿಪಾಲನೆ ಮಾಡುವವರ ವಿರುದ್ಧ ಸಿಡಿದೇಳುತ್ತಾರೆ. ಆದ್ದರಿಂದ ಶ್ರೀಯುತರು ಇತರ ಯಾವುದೇ ಜಾತಿಗೆ ಸೀಮಿತವಾದವರಲ್ಲಾ. ಎಲ್ಲ ಜಾತಿಯ ಜನನಾಯಕರಾಗಿದ್ದಾರೆ. ಇದರಿಂದಾಗಿ ಇತರ ರಾಜಕೀಯ ನಾಯಕರಿಗಿಂತಲೂ ಭಿನ್ನರಾಗಿದ್ದಾರೆ. ಆದರೆ ಕುರುಬ ಜನಾಂಗವು ಸಿದ್ದರಾಮಯ್ಯನವರು ತಮ್ಮ ನಾಯಕ ಎಂದು ಒಪ್ಪಿಕೊಂಡು ಶ್ರೀಯುತರ ಬೆನ್ನ ಹಿಂದೆ ನಿಂತಿದ್ದಾರೆ. ಆದರೆ ಶ್ರೀಯುತರು ಈ ಜನಾಂಗಕ್ಕೆ ಮಾತ್ರ ಸೀಮೀತವಾಗಿರದೆ ಎಲ್ಲ ಜಾತಿಯ ಬಡವರು, ಅಲ್ಪ ಸಂಖ್ಯಾತರು, ಹಿಂದುಳಿದವರು, ದಲಿತರು ಶ್ರೀಯುತರನ್ನು ತಮ್ಮ ನಾಯಕ ಎಂದು ಒಪ್ಪಿಕೊಂಡಿದ್ದಾರೆ. ಇವರು ಎಲ್ಲ ಬಡವರನ್ನು ಮಮತೆಯಿಂದ ಕಾಣುತ್ತಾರೆ. ಒಂದೇ ಜಾತಿಯ ಪರ ಇರಕೂಡದು ಎಂದಿದ್ದಾರೆ. ಇವರ ಯೋಜನೆಗಳು ಕೇವಲ ಅಹಿಂದ ವರ್ಗದ ಏಳಿಗೆಗೆ ಮಾತ್ರ ಸೀಮಿತವಾಗದೆ, ಇಡೀ ಕರ್ನಾಟಕದ ಬಡಜನತೆಯ ಪರವಾದ ಯೋಜನೆಗಳನ್ನು ಇವರು ಜಾರಿಗೆ ತಂದಿದ್ದಾರೆ. ಇವು ಎಲ್ಲ ಜಾತಿಯ ಜನರಿಗೆ ಉಪಯುಕ್ತವಾದ ಯೋಜನೆಗಳಾಗಿವೆ. ಇದರಿಂದಾಗಿ ಎಲ್ಲ ಜಾತಿಯ ಜನರ ಅಭಿವೃದ್ಧಿಗೆ ಈ ಯೋಜನೆಗಳು ಉಪಯುಕ್ತವಾಗಿದೆ. ಶ್ರೀಯುತರು ಈ ಮೂಲಕ ಎಲ್ಲ ಜನರನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಿದ್ದಾರೆ. ಸಮಾನತೆಯ ಸಮಾಜ ನಿರ್ಮಿಸಲು ಎಲ್ಲರಿಗೂ ಸಾಧ್ಯವಾಗುವದಿಲ್ಲ. ಆದರೆ ಶ್ರೀಯುತರು **ಎಲ್ಲರಿಗೆ ಸಮಾನವಾದ ಅಧಿಕಾರವನ್ನು ಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ**. "ಈ ಸಮಾಜದಲ್ಲಿ ನನಗೆ ಹೇಗೆ ಬದುಕಲಿಕ್ಕೆ ಅವಕಾಶವಿದೆಯೋ, ಹಕ್ಕಿದೆಯೋ, ಹಾಗೆಯೇ ಈ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಇರಲೇಬೇಕು" ಎಂಬ ತತ್ವಸಿದ್ಧಾಂತದ ಬದ್ಧತೆಯನ್ನು ಬಲವಾಗಿ ಇಟ್ಟುಕೊಂಡವರಾಗಿದ್ದಾರೆ.

**ಸಂಘಟನೆ**

ಇತಿಹಾಸದ ಚಕ್ರವು ಮುಂದೆ ಚಲಿಸಿದಂತೆ ಮಾನವನ ಮೂಲಭೂತ ಅವಶ್ಯಕತೆಗಳು ಹೆಚ್ಚುತ್ತಾ ಹೋಗಿವೆ. ಅವುಗಳನ್ನು ಪಡೆದುಕೊಳ್ಳಲು ಮಾನವನು ಎಚ್ಚೆತ್ತುಕೊಂಡಿದ್ದಾನೆ. ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿ ತವಕಿಸುತ್ತಿದ್ದಾನೆ. ತನ್ನ ಅವಶ್ಯಕತೆ ಮತ್ತು ಸಮಾಜದ ಅಭಿವೃದ್ಧಿಗಾಗಿ ದುಡಿಯುವ ಅವಕಾಶಕ್ಕಾಗಿ ಸಂಘಟನೆಯನ್ನು ಮಾಡಿಕೊಳ್ಳುವುದು ಇಂದಿನ ದಿನಗಳಲ್ಲಿ ಅವಶ್ಯಕವಾಗಿದೆ. ಅಹಿಂದ ಸಂಘಟನೆಯೊಂದಿಗೆ ಸಿದ್ದರಾಮಯ್ಯನವರು ದಲಿತರು ಹಿಂದುಳಿದವರು, ಅಲ್ಪ ಸಂಖ್ಯಾತರು, ತಳ ಸಮುದಾಯದವರು ತಬ್ಬಲಿ ಜಾತಿಯವರೂ, ಸಾಮಾಜಿಕವಾಗಿ ಹಿಂದುಳಿದವರು ತಮಗೆ ದೊರೆಯುವ ಪಾಲನ್ನು ಪಡೆದುಕೊಳ್ಳಲು ಮತ್ತು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕವಾಗಿ ತಮಗೆ ಸಿಗುವ ಪಾಲುದಾರಿಕೆಗಾಗಿ ಜನರು ಸಂಘಟನೆಯಾಗುವುದು ಅವಶ್ಯವಾಗಿದೆ. ಮುಖ್ಯವಾಗಿ ರಾಜಕೀಯ ಅಧಿಕಾರ ಪಡೆಯಲು ಸಂಘಟನೆಯಾಗಬೇಕು. ನಾವು ಇನ್ನೊಬ್ಬರ ಕೈಯಲ್ಲಿ ರಾಜಕೀಯ ಅಧಿಕಾರ ಕೊಟ್ಟು ಅಭಿವೃದ್ಧಿಯಾಗಬೇಕೆಂದರೆ, ಅಭಿವೃದ್ಧಿಯಾಗುವುದಿಲ್ಲ. ನೀವೇ ರಾಜಕೀಯ ಅಧಿಕಾರವನ್ನು ಹಿಡಿದರೆ ನೀವು ಅಭಿವೃದ್ಧಿಯಾಗುತ್ತೀರಿ. ಯಾಕೆಂದರೆ ಯಾರ ಕೈಯಲ್ಲಿ ರಾಜಕೀಯ ಅಧಿಕಾರ ಇರುತ್ತದೆಯೋ ಅವರು ದೇಶದ ಸಂಪತ್ತನ್ನು ಖರ್ಚು ಮಾಡುತ್ತಾರೆ. ಆದರೆ ನಾವು ದೇಶದ ಸಂಪತ್ತು ಹಾಗೂ ರಾಜಕೀಯ ಅಧಿಕಾರವನ್ನು ಬೇರೆಯವರ ಕೈಯಲ್ಲಿ ಕೊಟ್ಟು ನಾವು ಸಮಾನರಾಗಬೇಕು. ಸಮಾನವಾದ ಆರ್ಥಿಕತೆ ಹಂಚಿಕೆಯಾಗಬೇಕು ಎಂದು ಹೇಳುತ್ತಾ ಕುಳಿತುಕೊಂಡರೆ ನಾವು ಎಂದೂ ಅಭಿವೃದ್ಧಿಯಾಗುವುದಿಲ್ಲ. ನಾವು ಬದಲಾವಣೆಯನ್ನು ವಿರೋಧಿಸುವವರ ಕೈಯಲ್ಲಿ ರಾಜಕೀಯ ಅಧಿಕಾರವನ್ನು ಕೊಟ್ಟು ಬದಲಾವಣೆಯಾಗಬೇಕೆಂದರೆ ಹೇಗೆ ಬದಲಾವಣೆ ಯಾಗುತ್ತದೆ? ಇದನ್ನು ಅರಿತುಕೊಂಡು ಮಹಾ ಮಾನವತಾವಾದಿ ಜಗಜ್ಯೋತಿ ಬಸವಣ್ಣನವರು 12ನೆಯ ಶತಮಾನದಲ್ಲಿ ಮೊದಲ ಪಾರ್ಲಿಮೆಂಟ್ ಆದ ಅನುಭವ ಮಂಟಪವನ್ನು ನಿರ್ಮಿಸಿ ಎಲ್ಲ ಜಾತಿ ಜನಾಂಗದವರು ಭಾಗವಹಿಸುವಂತೆ ಮಾಡಿದರು. ಯಾಕೆಂದರೆ ಎಲ್ಲರಿಗೂ ರಾಜಕೀಯ ಅಧಿಕಾರ, ಆರ್ಥಿಕ ಅಧಿಕಾರ, ಸಾಮಾಜಿಕ ಕಾರ್ಯಗಳ ಬಗ್ಗೆ ಚರ್ಚಿಸಲು ಮತ್ತು ದೇಶದ ಸಂಪತ್ತನ್ನು ಹೇಗೆ ಮತ್ತು ಯಾರ, ಯಾವ ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕು. ಮತ್ತು ಎಲ್ಲ ಜನರಿಗೂ ಸಮಾನವಾಗಿ ಹಕ್ಕುಗಳ ಹಂಚಿಕೆಯಾಗಬೇಕು ಎನ್ನುವುದೇ ಅನುಭವ ಮಂಟಪದ ಮುಖ್ಯ ಉದ್ದೇಶವಾಗಿತ್ತು. ಹಾಗೆ ಅಂಬೇಡ್ಕರರವರು "ರಾಜಕೀಯ ಅಧಿಕಾರ ಎಲ್ಲ ಸಮಸ್ಯೆಗಳ ಪರಿಹಾರದ ಕೀಲಿಕೈ ಇದ್ದಂತೆ" ಎಂದು ಹೇಳಿದ ಮಾತು ಸತ್ಯವಾಗಿದೆ.

ಆದರೆ ಶ್ರೀಯುತರ ರಾಜಕೀಯ ಅಧಿಕಾರ, ಆರ್ಥಿಕ ಅಧಿಕಾರ ಜಾತೀಯತೆ ಹೋಗಲಾಡಿಸಲು ಸಮಾಜ ಸುಧಾರಣೆಗೆ ಸಂಘಟನೆಯಾಗುವುದು ಪ್ರಮುಖವಾಗಿದೆ. ಇದರಿಂದ ನಾವು ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತದೆ.

**ಸಾಮಾಜಿಕ ನ್ಯಾಯ**

ಸಿದ್ದರಾಮಯ್ಯನವರು ಶೋಷಿತ ವರ್ಗದವರಿಗೆ ಜಾಗೃತೆ ಬರಬೇಕು. ನಮಗೆ ಸಂವಿಧಾನ ಬದ್ಧರಾಗಿ ನ್ಯಾಯಯುತವಾಗಿ ಸಿಗುವ ಅವಕಾಶಗಳು ಸಿಕ್ಕಿಲ್ಲ. ಸರ್ವರಿಗೂ ಸಮಪಾಲು, ಸಮಬಾಳು ಎಂದು ಹೇಳುವುದು ಕೇವಲ ಮಾತಿನಲ್ಲಿದೆ. ಅವು ಜಾರಿಯಾಗಬೇಕಾದರೆ ನಮಗೆ ಅವುಗಳನ್ನು ಪಡೆದುಕೊಳ್ಳುತ್ತೇವೆ ಎಂಬ ತುಡಿತ ಬರಬೇಕು. ಮುಂದೊಂದು ದಿನ ಆ ವಾತಾವರಣ ನಿರ್ಮಾಣವಾಗಿ ಅಂದು ಮಾತ್ರ ಬದಲಾವಣೆಯ ಕಡೆಗೆ ಸಾಗಲಿಕ್ಕೆ ಸಾಧ್ಯ. ಸಾಮಾಜಿಕ ನ್ಯಾಯ ಸಿಗಬೇಕಾದರೆ, ಜಾತಿ ಜಾತಿಗಳ ನಡುವೆ ಸಮಾನತೆ ಬರಬೇಕು, ಜಾತಿ ಜಾತಿಗಳಲ್ಲಿ ಆರ್ಥಿಕ ಸಮಾನತೆ ಬಂದರೆ ಮಾತ್ರ ಸಾಮಾಜಿಕ ನ್ಯಾಯದ ಕಡೆಗೆ ಸಮಾಜ ಹೋಗುತ್ತದೆ ಎಂದು ಶ್ರೀಯುತರು ಪ್ರತಿಪಾದಿಸಿದರು. ಯಾರಿಗೆ ಏನು ಸಿಗಬೇಕೋ ಅದು ಸಿಕ್ಕರೆ ಮಾತ್ರ, ಸಾಮಾಜಿಕ ನ್ಯಾಯ ದೊರೆತಂತಾಗುತ್ತದೆ.

**ಧರ್ಮ**

ಧರ್ಮವು ಮಾನವನ ಆಂತರಿಕವಾದ ಮತ್ತು ಮಾನಸಿಕ ವಿಚಾರವಾಗಿದೆ. ಇದು ಜನರ ಭಾವನೆಗಳಿಗೆ ಸಂಬಂಧಿಸಿದ್ದು. ನಾವು ಪ್ರೀತಿಯಿಂದ ಮತ್ತು ವಿಶ್ವಾಸದಿಂದ ಎಲ್ಲರೂ ಸಮಾನವಾಗಿ ನೈತಿಕವಾಗಿ ಜೀವಿಸಲು ಮಾರ್ಗವನ್ನು ತಿಳಿಸುವಂಥ' ವಿಚಾರಗಳನ್ನೊಳಗೊಂಡಿದೆ. ಸಿದ್ದರಾಮಯ್ಯನವರು ಧರ್ಮ ಎಂದರೆ ಎಲ್ಲರೂ ಸಮಾನವಾಗಿ ಬಾಳುವುದು, ಶಾಂತಿ ಪ್ರೇಮದಿಂದ ಇರುವುದು, ಮತ್ತು ನೀನು ನನ್ನನ್ನು ಪ್ರೀತಿಸಬೇಕು. ನಾನು ನಿನ್ನನ್ನು ಪ್ರೀತಿಸಬೇಕು. ನಾನು ನೀನು ಸಮಾನ ಗೌರವದಿಂದ ಬದುಕುವುದೇ ಧರ್ಮ ಎಂದು ಹೇಳಿದ್ದಾರೆ. ದೇವರನ್ನು ಯಾರೂ ನೋಡಿಲ್ಲ. ಆದರೆ ಒಂದು ಅಗೋಚರವಾದ ಶಕ್ತಿಯು ಇದೆ. ನಾನು ಮಾತ್ರ ಆಸ್ತಿಕನಲ್ಲ ಮತ್ತು ನಾಸ್ತಿಕನೂ ಅಲ್ಲ. ಆದರೆ ಪ್ರತಿದಿನ ನಾನು ಪೂಜೆ ಮಾಡುವುದಿಲ್ಲ. ಆದರೆ ನಾನು ಹಳ್ಳಿಗಳಿಗೆ ಹೋದಾಗ ದೇವಸ್ಥಾನಕ್ಕೆ ಹೋಗುತ್ತೇನೆ. ಹಾಗಂತ ದೇವಸ್ಥಾನಕ್ಕೆ ಹೋಗಲೇಬಾರದೆಂದಲ್ಲ ಆದರೆ ನನ್ನ ಹೆಂಡತಿ ಮನೆಯಲ್ಲಿ ಹೋಮ ಮಾಡುತ್ತಾರೆ. ಅದು ಅವರ ಸ್ವಾತಂತ್ರ್ಯ. ನನಗೆ ಮಾತ್ರ ದೇವರು ಎಂದರೆ ಮತ ಕೊಟ್ಟ ಮತದಾರರೇ ದೇವರು. ಈ ಮತದಾರರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಳ್ಳುವುದೇ ನನಗೆ ಪ್ರಮುಖವಾದುದ್ದು, ಎಂದು ಶ್ರೀಯುತರು ಹೇಳಿದ್ದಾರೆ. ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದರಿಂದ ಒತ್ತಡ ಕಡಿಮೆ ಮಾಡಿಕೊಳ್ಳಬಹುದು ಎಂದು ಸಿದ್ದರಾಮಯ್ಯನವರು ಹೇಳಿದ್ದಾರೆ. ಒಟ್ಟಾರೆಯಾಗಿ ಧರ್ಮದ ಬಗ್ಗೆ ಹೇಳುವುದಾದರೆ, ರಾಜ್ಯ ರಾಷ್ಟ್ರ ಅಷ್ಟೇ ಅಲ್ಲ, ಸಮಸ್ತ ವಿಶ್ವದ ಜನಮನವು ಸಭ್ಯತೆ, ಸೌಜನ್ಯ, ಔದಾರ್ಯ, ಸತ್ಯ ಅಹಿಂಸೆ, ಆತ್ಮ ಸಂಯಮ, ಸಹನೆ, ಕರುಣೆ, ಸಂತೋಷ, ಸೇವೆ ಇವೇ ಮೊದಲಾದ ಗುಣಗಳ ಅನುಷ್ಠಾನ ಆಚರಣೆಯ ಪಾಲನೆಯೇ ಮಾನವನ ಧರ್ಮವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

**ಉಪಸಂಹಾರ**

ಸಿದ್ದರಾಮಯ್ಯವರು ಕರ್ನಾಟಕದಲ್ಲಿ ಎರಡು ಸಲ ಉಪಮುಖ್ಯಮಂತ್ರಿಯಾಗಿ, ಹಣಕಾಸು ಮಂತ್ರಿಯಾಗಿ ಹನ್ನೊಂದು ಸಾರಿ ಹಣಕಾಸು ಮುಂಗಡಪತ್ರವನ್ನು ಮಂಡಿಸಿದ್ದಾರೆ. ಮತ್ತು ವಿರೋಧ ಪಕ್ಷದ ನಾಯಕರಾಗಿ ಸದ್ಯ ಮುಖ್ಯಮಂತ್ರಿಯಾಗಿ ಸಾಮಾಜಿಕ ಮತ್ತು ಸಮಾನತೆಯ ಅಂಶಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ನ್ಯಾಯ ಕೋಡಿಸುವುದಕ್ಕಾಗಿ ಶೋಷಿತ, ಬಡವರ, ದುರ್ಬಲ ವರ್ಗದವರಿಗೆ ಹಾಗೂ ಹಿಂದೂಳಿದ ಅಲ್ಪಸಂಖ್ಯಾತ, ದಲಿತರ ಅಭಿವೃದ್ಧಿಗಾಗಿ ಅನ್ನಭಾಗ್ಯ, ಸಾಲ ಮನ್ನಾ, ಮನಸ್ವಿನಿ ಮೈತ್ರಿ ಯೋಜನೆ, ಕ್ಷೀರಧಾರೆ, ಋಣಮುಕ್ತಭಾಗ್ಯ, ವಸತಿ ಭಾಗ್ಯ, ವಿದ್ಯಾಸಿರಿ, ಕ್ಷೀರಭಾಗ್ಯ ಮುಂತಾದ ಜನಪರವಾದ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಇವುಗಳಿಂದ ಆರ್ಥಿಕವಾಗಿ ಹಿಂದುಳಿದ ಶೋಷಿತ ವರ್ಗದವರಿಗೆ ಸಾಮಾಜಿಕ ನ್ಯಾಯ ದೊರಕಿಸಿದ ಕಿರ್ತಿಯು ಸಿದ್ದರಾಮಯ್ಯನವರಿಗೆ ಸಿಗುತ್ತದೆಮತ್ತು ಮಹಿಳೆಯರಿಗೆ 33%, ಹಾಗೂ ಹಿಂದುಳಿದ ವರ್ಗದವರಿಗೆ 26%, ಗ್ರಾಮ ಪಂಚಾಯತಿಯಲ್ಲಿ ಮೀಸಲಾತಿಯನ್ನು ಸಿದ್ದರಾಮಯ್ಯವರು ಜಾರಿಗೆ ತಂದಿದ್ದಾರೆ. ಇದರಿಂದಾಗಿ ತೊಟ್ಟಿಲು ತುಗುವ ಕೈಗಳು ರಾಜಕೀಯ ಅಧಿಕಾರ ಹಿಡಿಯುವಂತಾಯಿತು. ಹಾಗೂ ಶೋಷಿತ ವರ್ಗಕ್ಕೆ ಶ್ರೀಯುತರು ಶಕ್ತಿ ತುಂಬುವ ಕಾರ್ಯವನ್ನು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯವು ದೇಶದ ಆರ್ಥಿಕತೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದಕ್ಕೆ ಕಾರಣವೆನೆಂದರೆ ಸಿದ್ದರಾಮಯ್ಯನವರ ಆರ್ಥಿಕ ಸುಧಾರಣೆಗಳು ಹಾಗೂ ದುಡಿಯುವ ವರ್ಗಕ್ಕೆ ಶಕ್ತಿ ತುಂಬಿರುವುದೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಒಟ್ಟಿನಲ್ಲಿ ಹೇಳಬೇಕೆಂದರೆ ಸಿದ್ದರಾಮಯ್ಯನವರು ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಯನ್ನು ತರುವುದಕ್ಕಾಗಿ ಶ್ರಮಿಸುತ್ತಿದ್ದಾರೆ. ಶೋಷಿತ ವರ್ಗಕ್ಕೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

### ಆಕರ ಗ್ರಂಥಗಳು


1. ತುಮಕೂರು ಮಹದೇವಯ್ಯ, 'ಇಟ್ಟ ಗುರಿ ದಿಟ್ಟ ಹೆಜ್ಜೆ' ಸಮಾನತೆಯ ಸಾಧಕ ಸಂಕಲ್ಪದ ಹಾದಿ, ಕರ್ನಾಟಕ ಸಾಹಿತ್ಯ ವೇದಿಕೆ, ಬೆಂಗಳೂರು, 2015.
2. ಮಾನಸ ಮೈಸೂರು, 'ಸದನದಲ್ಲಿ ಸಿದ್ದರಾಮಯ್ಯ' ತನಮನ ಪ್ರಕಾಶನ, ಮೈಸೂರು, 2012.
3. ಕರ್ನಾಟಕ ರಾಜ್ಯ ವಾರ್ತಾ ಇಲಾಖೆ, 'ನುಡಿದಂತೆ ನಡೆದಿದ್ದೇವೆ' ವಾರ್ತಾ ಇಲಾಖೆ, ಬೆಂಗಳೂರು, 2014.
4. ಮಂಜುಳಾ ಮಾನಸ, 'ಅಂದು ಅರಸು, ಇಂದು ಸಿದ್ದು' ತನುಮನ ಪ್ರಕಾಶನ, ಮೈಸೂರು, 2005.
5. ಶ್ರೀನಿವಾಸ ರಾವ್. ಎಸ್.ವಿ. ತುಮಕೂರು ಮಹಾದೇವಯ್ಯ, 'ಕರ್ನಾಟಕದ ಮುಖ್ಯಮಂತ್ರಿಗಳು' ಕರ್ನಾಟಕ ಸಾಹಿತ್ಯ ವೇದಿಕೆ, ಬೆಂಗಳೂರು, 2013.
6. ಓಡೆಯರ್ ಡಿ. ಹೆಗಡೆ, ಜೆ. ಶಿವಚಂದ್ರ (ಸಂ) 'ಸಮಾಜಮುಖಿ ಸಿದ್ದರಾಮಯ್ಯ' ಮಾನವ ಅಭಿವೃದ್ಧಿ ಅಧ್ಯಯನ ಕೇಂದ್ರ, ಮೈಸೂರು, 2005.
7. ಚಿಕ್ಕಮಾದು ಎನ್.ಎಸ್. (ಸಂ) ಸಿರಾಜ್ ಎಸ್. ಅನೀಸ್, ಮೈಸೂರು ತಾಲ್ಲೂಕು ಗ್ಯಾಸೆಟಿರಿಯನ್, ಕರ್ನಾಟಕ ಸರ್ಕಾರ, ಬೆಂಗಳೂರು, 2010.
8. ಪೊಲಿಟಿಕಲ್ ಅಡ್ವೈಸರ್ ಸಂಚಿಕೆ 25 ದಿನಾಂಕ: ಅಗಸ್ಟ 15, 2014.
9. ದೂರದರ್ಶನ ಸಂದರ್ಶನ, "ನನ್ನ ಕಥೆ" ಟಿ.ವಿ.9, 20 ಮಾರ್ಚ್ 2013
10. www.cmkarnataka.gov.in